**ಓ.ಎಸ್** 117/2016 **ಡಿ.ಡಬ್ಲೂಃ 1**

ಸಾಕ್ಷಿಯನ್ನು ದಿಃ **04.10.2023** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಬಿ.ಆರ್.ಎಲ್. ವಕೀಲ**ರಿಂದ**

ನಾನು ಬಿ.ಎಸ್.ಸಿ ವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ವಾದಿಯೂ ಈ ದಾವೆಯನ್ನು ಭಾಗ ಬರಬೇಕೆಂದು ಎಂದು ಕೇಳಿ ಹಾಕಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ತಂದೆಗೆ ನಾವು 3 ಜನ ಮಕ್ಕಳು. ಅವರುಗಳೆಂದರೆ, ನಾನು ಹಿರಿಯ ಮಗ, 2 ನೇ ಪ್ರತಿವಾದಿ 2 ನೇ ಮಗ, ವಾದಿ ಕೊನೆಯ ಮಗಳಾಗಿದ್ದಾರೆ. ಈ ದಾವಾ ಸ್ವತ್ತುಗಳು ನಮ್ಮ ತಾತನಿಂದ ತಂದೆಗೆ ಬಂದಿರುವ ನಮ್ಮ ಪಿತ್ರಾರ್ಜಿತ ಸ್ವತ್ತುಗಳಾಗಿವೆ. ದಾವಾ ಸ್ವತ್ತುಗಳೆಲ್ಲಾ ವಿಭಾಗ ಆಗದೆ ಇರುವ ಒಟ್ಟು ಕುಟುಂಬದ ಸ್ವತ್ತುಗಳಾಗಿವೆ ಎಂದರೆ ಸರಿ. ವಾದಿಗೆ ಈ ದಾವಾ ಸ್ವತ್ತುಗಳಲ್ಲಿ 1/3 ನೇ ಭಾಗಾಂಶದ ಹಕ್ಕಿದೆ ಎಂದರೆ ಸರಿ. ದಾವಾ ಸ್ವತ್ತುಗಳ ಪೈಕಿ ದೈತನಕೆರೆ ಕಾವಲಿನ ಸ್ವತ್ತುಗಳು ಮುಳುಗಡೆ ಆಗಿದೆ ಎಂದರೆ ಸಾಕ್ಷಿ ಸುಮಾರು 19.10 ಎಕರೆ ಮುಳುಗಡೆ ಆಗಿದೆ ಎನ್ನುತ್ತಾರೆ. ಈ ಮುಳುಗಡೆ ಸ್ವತ್ತುಗಳ ಪರಿಹಾರದ ಬಗ್ಗೆ ಈ ದಾವಾದ 2 ನೇ ಪ್ರತಿವಾದಿ ಪರ ಹಾಜರಾಗಿರುವ ವಕೀಲರು ಸ್ವತಃ ಎಲ್.ಎ.ಸಿ ಪ್ರಕರಣ ನಡೆಸಿ ವಾದಿ ಮತ್ತು ಪ್ರತಿವಾದಿ 1 ಮತ್ತು 2 ರವರಾದ ನಮ್ಮಗಳಿಗೆ ಸಮವಾಗಿ ಪರಿಹಾರದ ಹಣವನ್ನು ಕೊಡಿಸಿಕೊಟ್ಟಿದ್ದಾರೆ ಎಂದರೆ ಸರಿ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.